ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

ಸಂಖ್ಯೆ: ಮಿಮ್ಸ್/ಸರಬ/ಟೆಂಡರ್/49/2013–14

ದಿನಾಂಕ: 30.08.2013 ರಂದು ಪೂರ್ವಾಹ್ನ 11.00 ಗಂಟೆಗೆ ಮಾನ್ಯ ನಿರ್ದೇಶಕರು, ಮಿಮ್ಸ್, ಮಂಡ್ಯ, ರವರ ಕೊಠಡಿಯಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಖರೀದಿ ಸಮಿತಿ ಸಭೆಯ ನಡವಳಿಗಳು:–

***<u>ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳು:</u>***

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು – ಅಧ್ಯಕ್ಷರು
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
   (ವೈದ್ಯಕೀಯ ಶಿಕ್ಷಣ)
   ವಿಧಾನ ಸೌಧ, ಬೆಂಗಳೂರು.

2. ನಿರ್ದೇಶಕರು – ಉಪಾಧ್ಯಕ್ಷರು
   ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ಮಂಡ್ಯ.

3. ಮುಖ್ಯ ಆಡಳಿತಾಧಿಕಾರಿಗಳು – ಸದಸ್ಯರು
   ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ಮಂಡ್ಯ.

4. ವೈದ್ಯಕೀಯ ಅಧೀಕ್ಷಕರು – ಸದಸ್ಯರು
   ಮಿಮ್ಸ್ ಬೋಧಕ ಆಸ್ಪತ್ರೆ,
   ಮಂಡ್ಯ

5. ಆರ್ಥಿಕ ಅಧಿಕಾರಿಗಳು ಕಂ ಮುಖ್ಯ ಲೆಕ್ಕಾಧಿಕಾರಿಗಳು – ಸದಸ್ಯ ಕಾರ್ಯದರ್ಶಿಗಳು
   ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
   ಮಂಡ್ಯ.

ಮಾನ್ಯ ನಿರ್ದೇಶಕರು, ಮಿಮ್ಸ್ ಖರೀದಿ ಸಮಿತಿ ಉಪಾಧ್ಯಕ್ಷರು ರವರು ಮಿಮ್ಸ್ ಖರೀದಿ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

ಖರೀದಿ ಸಮಿತಿ ಸಭೆಗೆ ಮಂಡಿಸಲಾದ ಟಿಪ್ಪಣಿಯಲ್ಲಿ ಮಿಮ್ಸ್ ಸಂಸ್ಥೆಗೆ ಮತ್ತು ಮಿಮ್ಸ್ ಬೋಧಕ ಆಸ್ಪತ್ರೆಗೆ ರೋಗಿಗಳ ಹಿತದೃಷ್ಟಿಯಿಂದ ಮತ್ತು ಭಾರತೀಯ ವೈದ್ಯಕೀಯ ಮಂಡಳಿ (ಎಂ.ಸಿ.ಐ.) ರವರ ಮಾರ್ಗಸೂಚಿ ಅನ್ವಯ ಅಗತ್ಯವಿರುವ ವೈದ್ಯಕೀಯ ಉಪಕರಣಗಳು, ಪಿಠೋಪಕರಣ, ಗ್ರಂಥಾಲಯ ಪುಸ್ತಕಗಳು ಹಾಗೂ ಇತರೆ ಸಾಮಾಗ್ರಿಗಳನ್ನು ಡಿಜಿಎಸ್&ಡಿ ದರ ಒಪ್ಪಂದದಂತೆ ಹಾಗೂ ಟೆಂಡರ್ ಮೂಲಕ ಕೆಟಿಪಿಪಿ ಕಾಯ್ದೆಯ 1999 ನಿಯಮ 2000 ರ ಅನ್ವಯ ಖರೀದಿಸಲು ಸಂಸ್ಥೆಯ ವಿಭಾಗಗಳ ಮುಖ್ಯಸ್ಥರು ನೀಡಿರುವ ಬೇಡಿಕೆ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದ್ದು, ಇದರ ಆಧಾರದಲ್ಲಿ ಖರೀದಿ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ಉಪಕರಣಗಳನ್ನು ಪಿಠೋಪಕರಣ, ಗ್ರಂಥಾಲಯ ಪುಸ್ತಕಗಳನ್ನು ಮತ್ತು ಇತರೆ ಸಾಮಾಗ್ರಿಗಳನ್ನು ಖರೀದಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಯಿತು.

1. <u>ವಿಷಯ: ಮಿಮ್ಸ್ ಬೋಧಕ ಆಸ್ಪತ್ರೆಗೆ 125 ಕೆವಿಎ ಜನರೇಟ್‌ರ (2 ಸಂಖ್ಯೆ) ಖರೀಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಬೋಧಕ ಆಸ್ಪತ್ರೆಗೆ ಜನರೇಟರ್ (2 ಸಂಖ್ಯೆ) ಖರೀದಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿ, ಡಿಜಿಎಸ್&ಡಿ ದರಗಳು ಜನರೇಟರ್ ಖರೀದಿಸಲು ಲಭ್ಯವಿರುತ್ತದೆ ಎಂದು ತಿಳಿಸಿದರು ಹಾಗೂ ಸದರಿ ವೆಚ್ಚವನ್ನು ಮಿಮ್ಸ್ ಬೋಧಕ ಆಸ್ಪತ್ರೆಯ ಲೆಕ್ಕ ಶೀರ್ಷಿಕೆಯಿಂದ ಭರಿಸುವುದಾಗಿ ಸಮಿತಿ ಸಭೆಗೆ ತಿಳಿಸಿದರು. ಸಮಿತಿ ಅಧ್ಯಕ್ಷರು ಸಭೆಯಲ್ಲಿ ಚರ್ಚಿಸಿದರು, ಅದರಂತೆ ಡಿಜಿಎಸ್&ಡಿ ದರದಲ್ಲಿ ಜನರೇಟರ್ ಖರೀದಿಸಲು ಸಮಿತಿ ಸದಸ್ಯರು ಒಮ್ಮತ ಅಭಿಪ್ರಾಯ ನೀಡಿದರು.

2. <u>ವಿಷಯ: ದೈಹಿಕ ಶಿಕ್ಷಣ ವಿಭಾಗದಲ್ಲಿ ವ್ಯಾಯಮ ಶಾಲೆ ತೆರೆಯಲು ಬೇಕಾದ ಉಪಕರಣಗಳನ್ನು ಖರೀದಿಸುವ ಬಗ್ಗೆ:</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಸಂಸ್ಥೆಯ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ ವಿಭಾಗದಲ್ಲಿ ವ್ಯಾಯಮ ಶಾಲೆ ತೆರೆಯಲು ಬೇಕಾದ ಉಪಕರಣಗಳನ್ನು ಖರೀದಿಸುವ ಬಗ್ಗೆ ಸಮಿತಿ ಅಧ್ಯಕ್ಷರ ಜೊತೆ ಚರ್ಚಿಸಿದರು. ಅಧ್ಯಕ್ಷರು ಸಮಿತಿ ಸದಸ್ಯರ ಜೊತೆ ಚರ್ಚಿಸಿ, ವ್ಯಾಯಮ ಶಾಲೆಯ ಉಪಕರಣಗಳನ್ನು ಟೆಂಡರ್ ಮೂಲಕ ಕೆಟಿಪಿಪಿ ಕಾಯ್ದೆಯ 1999 ನಿಯಮಾವಳಿಗಳ 2000 ರ ಅನ್ವಯ ಖರೀದಿಸುವಂತೆ ತಿಳಿಸಿದರು. ಖರೀದಿ ಸಮಿತಿಯ ಎಲ್ಲಾ ಸದ್ಯಸರು ಖರೀದಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

3. <u>ವಿಷಯ: ಕೇಂದ್ರ ಗ್ರಂಥಾಲಯಕ್ಕೆ ಡಿಜಿಟಲ್ ಲೈಬ್ರರಿ (ಆರ್.ಎಫ್.ಐಡಿ) ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಗ್ರಂಥಾಲಯಕ್ಕೆ ಡಿಜಿಟಲ್ ಲೈಬ್ರರಿ ತಂತ್ರಜ್ಞಾನವನ್ನು ಅಳವಡಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿದರು, ಅಧ್ಯಕ್ಷರು ಬೇಡಿಕೆ ಪಟ್ಟಿಯ ಜೊತೆ ಲಗತ್ತಿಸಿರುವ ಮಾದರಿಯನ್ನು ಪರಿಶೀಲಿಸಿ, ಡಿಜಿಟಲ್ ಲೈಬ್ರರಿ ತಂತ್ರಜ್ಞಾನವನ್ನು ಅಳವಡಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು, ಅದರಂತೆ ಸಮಿತಿಯ ಎಲ್ಲಾ ಸದ್ಯಸರು ತಂತ್ರಜ್ಞಾನವನ್ನು ಅಳವಡಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

4. <u>ವಿಷಯ: Smart Podium ಖರೀದಿಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಬೋಧಕ ಕೊಠಡಿಗೆ Smart Podium ಖರೀದಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿದರು, ಅಧ್ಯಕ್ಷರು ಬೇಡಿಕೆ ಪಟ್ಟಿಯ ಜೊತೆ ಲಗತ್ತಿಸಿರುವ ಮಾದರಿಯನ್ನು ಪರಿಶೀಲಿಸಿ, ಸಭೆಯಲ್ಲಿ ಚರ್ಚಿಸಿ ಖರೀದಿಸಬಹುದೆಂದು ತಿಳಿಸಿದರು. ಅದರಂತೆ ಸಮಿತಿಯ ಎಲ್ಲಾ ಸದ್ಯಸರು ಖರೀದಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

5. <u>ವಿಷಯ: ಎಲ್.ಸಿ.ಡಿ. ಪ್ರೊಜೆಕ್ಟರ್ ಖರೀದಿಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಬೋಧಕ ಕೊಠಡಿಗೆ ಮತ್ತು ಇತರೇ ವಿಭಾಗಗಳಿಗೆ ಎಲ್.ಸಿ.ಡಿ. ಫ್ರೊಜೆಕ್ಟರ್ ಖರೀದಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿದರು, ಅಧ್ಯಕ್ಷರು ಎಲ್.ಸಿ.ಡಿ. ಪ್ರೊಜೆಕ್ಟರ್‌ಅನ್ನು ಡಿಜಿಎಸ್&ಡಿ ದರಗಳಲ್ಲಿ / ಟೆಂಡರ್ ಮೂಲಕ ಕೆಟಿಪಿಪಿ ಕಾಯ್ದೆಯ 1999 ನಿಯಮಾವಳಿಗಳ 2000 ರ ಅನ್ವಯ ಖರೀದಿಸುವಂತೆ ಸಮಿತಿಗೆ ತಿಳಿಸಿದರು. ಸಮಿತಿಯ ಎಲ್ಲಾ ಸದ್ಯಸರು ಖರೀದಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

6. <u>ವಿಷಯ: ಮಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದಲ್ಲಿ ನೆಟ್ ವರ್ಕ್‌ಕಿಂಗ್ ಸೇವೆಯನ್ನು ಒದಗಿಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದಲ್ಲಿ ನೆಟ್ ವರ್ಕ್‌ಕಿಂಗ್ ಸೇವೆಯನ್ನು ಒದಗಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿದರು, ಅಧ್ಯಕ್ಷರು ನೆಟ್ ವರ್ಕ್‌ಕಿಂಗ್ ಸೇವೆಯನ್ನು ಒದಗಿಸುವಂತೆ ಒಪ್ಪಿಗೆ ಸೂಚಿಸಿದರು, ಸಮಿತಿಯ ಎಲ್ಲಾ ಸದ್ಯಸರು ನೆಟ್ ವರ್ಕ್‌ಕಿಂಗ್ ಸೇವೆಯನ್ನು ಒದಗಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

7. <u>ವಿಷಯ: ಗ್ರಂಥಾಲಯದ ವೈದ್ಯಕೀಯ ಪುಸ್ತಕಗಳನ್ನು ಖರೀದಿಸುವ ಬಗ್ಗೆ:-</u>

ಖರೀದಿ ಸಮಿತಿಯ ಉಪಾಧ್ಯಕ್ಷರು ಮಿಮ್ಸ್ ಗ್ರಂಥಾಲಯಕ್ಕೆ ವೈದ್ಯಕೀಯ ಪುಸ್ತಕಗಳನ್ನು ಖರೀದಿಸುವ ಬಗ್ಗೆ ಸಮಿತಿ ಅಧ್ಯಕ್ಷರಲ್ಲಿ ಚರ್ಚಿಸಿದರು, ಅಧ್ಯಕ್ಷರು ವೈದ್ಯಕೀಯ ಪುಸ್ತಕಗಳನ್ನು ಖರೀದಿಸಲು ಒಪ್ಪಿಗೆ ಸೂಚಿಸಿದರು, ಸಮಿತಿಯ ಎಲ್ಲಾ ಸದ್ಯಸರು ಪುಸ್ತಕಗಳನ್ನು ಖರೀದಿಸಲು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

8. <u>ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು:-</u>

ಸಂಸ್ಥೆಯ ವಿಭಾಗಗಳಿಗೆ ಇಂಟರ್‌ಕಾಮ್ ಸೇವೆಯನ್ನು ಒದಗಿಸುವುದಾಗಿ ಮತ್ತು ಸಂಸ್ಥೆಗೆ ಬೇಕಾಗಿರುವ ಅವಶ್ಯ ಪಿಠೋಪಕರಣಗಳನ್ನು ಖರೀದಿಸುವ ಬಗ್ಗೆ ಉಪಾಧ್ಯಕ್ಷರು ಅಧ್ಯಕ್ಷರ ಜೊತೆ ಚರ್ಚಿಸಿದರು. ಇಂಟರ್‌ಕಾಮ್ ಸೌಲಭ್ಯವನ್ನು ಒದಗಿಸಲು ಡಿಜಿಎಸ್&ಡಿ ದರ ಇರುವುದಾಗಿ ತಿಳಿಸಿದರು. ಇಂಟರ್‌ಕಾಮ್ ಸೇವೆಯನ್ನು ಡಿಜಿಎಸ್&ಡಿ ದರದಲ್ಲಿ ಒದಗಿಸುವಂತೆ ಮತ್ತು ಪಿಠೋಪಕರಣಗಳನ್ನು ಟೆಂಡರ್ ಮೂಲಕ ಕೆಟಿಪಿಪಿ ಕಾಯ್ದೆಯ 1999 ನಿಯಮಾವಳಿಗಳ 2000 ರ ಅನ್ವಯ ಖರೀದಿಸುವಂತೆ ಸಭೆಗೆ ತಿಳಿಸಿದರು. ಅದರಂತೆ ಸಮಿತಿಯ ಎಲ್ಲಾ ಸದ್ಯಸರು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದರು.

(ಸಮಿತಿ ಉಪಾಧ್ಯಕರು ಖರೀದಿಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದರು).

ಸಮಿತಿ ಅಧ್ಯಕ್ಷರು ರೋಗಿಗಳ ಹಿತದೃಷ್ಟಿಯಿಂದ ಮತ್ತು ಭಾರತೀಯ ವೈದ್ಯಕೀಯ ಮಂಡಳಿ (ಎಂ.ಸಿ.ಐ) ರವರ ಮಾರ್ಗಸೂಚಿ ಅನ್ವಯ ತುರ್ತಾಗಿ ಅಗತ್ಯವಿರುವ ಉಪಕರಣಗಳನ್ನು ಆಧ್ಯತೆ ಮೇರೆಗೆ ಖರೀದಿಸುವಂತೆ ಕ್ರಮ ಕೈಗೊಳ್ಳುವುದಾಗಿ ಸಮಿತಿ ಸದಸ್ಯರಿಗೆ ತಿಳಿಸಿದರು. ಅದರಂತೆ ಸಮಿತಿ ಸದಸ್ಯರು ಸದರಿ ವಿಷಯವನ್ನು ಗಮನಿಸಿದ ನಂತರ ತಮ್ಮ ಅಭಿಪ್ರಾಯಗಳನ್ನು ಸಮಿತಿ ಅಧ್ಯಕ್ಷರ ಜೊತೆ ಚರ್ಚಿಸಿ, ಆಧ್ಯತೆಯ ಮೇರೆಗೆ ಉಪಕರಣ, ಪಿಠೋಪಕರಣ, ಪುಸ್ತಕಗಳನ್ನು ಹಾಗೂ ತುರ್ತಾಗಿ ಅವಶ್ಯವಿರುವ ಇತರೇ ಸಾಮಗ್ರಿಗಳನ್ನು ಖರೀದಿಸಿ ಸರಬರಾಜು ಮಾಡಬಹುದೆಂದು ಸಮಿತಿ ಸದಸ್ಯರು ತೀರ್ಮಾನಿಸಿ ಒಮ್ಮತ ಅಭಿಪ್ರಾಯ ನೀಡಿದರು.

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಆರ್ಥಿಕ ಅಧಿಕಾರಿಗಳು ಕಂ ಮುಖ್ಯ ಲೆಕ್ಕಾಧಿಕಾರಿಗಳು
ಸಮಿತಿ ಸದಸ್ಯ ಕಾರ್ಯದರ್ಶಿಗಳು
ಮಿಮ್ಸ್, ಮಂಡ್ಯ

ನಿರ್ದೇಶಕರು,
ಸಮಿತಿ ಉಪಾಧ್ಯಕ್ಷರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ

ಕಾರ್ಯದರ್ಶಿಗಳು,
ಸಮಿತಿ ಅಧ್ಯಕ್ಷರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ವೈದ್ಯಕೀಯ ಶಿಕ್ಷಣ)
ವಿಧಾನ ಸೌಧ, ಬೆಂಗಳೂರು